ರಾಜ್ಯದಲ್ಲಿರುವ ಸರಕಾರಿ ಕೈಗಾರಿಕಾ ಕೇಂದ್ರಗಳ ಕಾರ್ಯಕ್ರಮಗಳು

5091 - ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕಾ ಕೇಂದ್ರಗಳಲ್ಲಿ ಖಾಸಗಿ ವಲಯದವರ ಸಹಕಾರದಿಂದ ಸರ್ಕಾರದ ಸವಲತ್ತುಗಳನ್ನು ವೃದ್ಧಿಸಿ ಅವರಿಗೆ ತರಬೇತಿ ಕೊಡುವ ಸರ್ಕಾರದ ಯೋಜನೆಗಳ ವಿವರಗಳೇನು?*

ಆ) *ಸದರಿ ಯೋಜನೆಯು ಜಾರಿಯಲ್ಲಿದ್ದಲ್ಲಿ ಎಲ್ಲಾ ಕೇಂದ್ರಗಳಲ್ಲಿ ಅನುಷ್ಠಾನಗೊಳಿಸಲಾಗಿದೆಯೇ?*

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಇಲಾಖಾವತಿಯಿಂದ ರಾಜ್ಯದಲ್ಲಿ ಸರ್ಕಾರದ ಕೈಗಾರಿಕಾ ಕೇಂದ್ರಗಳಲ್ಲಿ ಖಾಸಗಿ ವಲಯದವರ ಸಹಕಾರದಿಂದ ಸರ್ಕಾರದ ಸವಲತ್ತುಗಳನ್ನು ವೃದ್ಧಿಸಿ ಅವರಿಗೆ ತರಬೇತಿ ಕೊಡುವ ಸರ್ಕಾರದ ಯೋಜನೆಗಳು ಯಾವುದೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಆಲಮಟ್ಟಿ ಜಲಾಶಯಕ್ಕೆ ಸ್ವಾಧೀನ ಪಡಿಸಿಕೊಂಡ ಜಮೀನು

5093 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಆಲಮಟ್ಟಿ ಜಲಾಶಯದ 521 ಎಫ್‌ಆರ್‌ಎಲ್ ಅಡಿ ಮುಳುಗಡೆಯಲ್ಲಿ ಬರುವ ಬಾಗಲಕೋಟೆ ನಗರದ ಮನೆಗಳಲ್ಲಿ ಅನೇಕ ವರ್ಷಗಳಿಂದ ವಾಸಮಾಡುತ್ತ ಬಂದಿರುವ ಬಡ ಬಾಡಿಗೆದಾರರಿಗೆ ಅವರಿಗೆ ನೀಡಲಾದ ಉಚಿತ ನಿವೇಶನ ಮಾತ್ರದಿಂದ ಮನೆ ಕಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲದಿರುವುದರಿಂದ ಅವರಿಗೆ ಹಣಕಾಸಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಹಾಗಿದ್ದಲ್ಲಿ ಅವರಿಗೂ ಕೂಡಾ ಮನೆ ಮಾಲೀಕರಂತೆ ರೂ.22,000.00 (ಎಕ್ಸ್‌ಗ್ರೇಸಿಯಾ) ಅನುದಾನ ನೀಡಲಾಗುವುದೇ?*

3) *ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಳ್ಳುವ ಕ್ರಮವೇನು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

1) ಬಂದಿದೆ. ಆಲಮಟ್ಟಿ ಜಲಾಶಯ ನಿರ್ಮಾಣದಿಂದ ಮುಳುಗಡೆಯಾಗುವ ಬಾಗಲಕೋಟೆ ನಗರದ ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ಕಾರ್ಯ ಕೈಗೊಳ್ಳುವ ಸಲುವಾಗಿ ಬಾಗಲಕೋಟೆ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ನಿಯಮದ ಪ್ರಕಾರ ಬಾಗಲಕೋಟೆ ನಗರದ ಮುಳುಗಡೆ

ಪ್ರದೇಶದಲ್ಲಿ ಬರುವ ಬಾಡಿಗೆದಾರರು ಅನುಗ್ರಹ ಅನುದಾನ ಪಡೆಯಲು ಅರ್ಹರಿರುವುದಿಲ್ಲ. ಸದ್ಯ ಬಾಡಿಗೆದಾರರಿಗೆ ನವನಗರದಲ್ಲಿ ನಿವೇಶನ ವಿತರಿಸುವ ಕಾರ್ಯಕೈಗೊಂಡಿದ್ದು ಅಲ್ಲಿ ಸಾಕಷ್ಟು ಬಾಡಿಗೆದಾರರು ಉಚಿತ ನಿವೇಶನಕ್ಕಿಂತ ಹೆಚ್ಚಿನ ಹಣ ತುಂಬಿ ದೊಡ್ಡ ಅಳತೆಯ ನಿವೇಶನವನ್ನು ಪಡೆದಿರುತ್ತಾರೆ.

2) ಅನುಗ್ರಹ ಅನುದಾನಕ್ಕೆ ಬಾಡಿಗೆದಾರರೂ ಅರ್ಹರಿರುವುದಿಲ್ಲ.

3) ಅನ್ವಯಿಸುವುದಿಲ್ಲ.

ಟೆಂಡರಿಗೆ ಮಂಜೂರಾತಿ ನೀಡುವುದು

5094 - ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ನಿವೃತ್ತಿಗೆ 6 ತಿಂಗಳು ಇರುವಾಗ ಟೆಂಡರ್ ಮಂಜೂರು ಮಾಡುವಂತಿಲ್ಲ ಮತ್ತು ಖರೀದಿ ಆದೇಶ ನೀಡುವಂತಿಲ್ಲ ಎಂದು ನಿರ್ಬಂಧಿಸಿ ರಾಜ್ಯ ಸರ್ಕಾರ ಕಾನೂನಿಗೆ ಮಾರ್ಪಾಟು ತಂದಿದೆಯೇ? ಹಾಗಿದ್ದಲ್ಲಿ ಆದೇಶ ಪ್ರತಿ ಲಗತ್ತಿಸುವುದು?

2) ಈ ರೀತಿ ಕಾನೂನಿಗೆ ತಿದ್ದುಪಡಿ ತರಲು ಕಾರಣಗಳೇನು?

3) ಈ ಕಾನೂನು ಯಾವ ಯಾವ ಇಲಾಖೆಗೆ ಅನ್ವಯಿಸುತ್ತದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

1) ರಾಜ್ಯ ಸರ್ಕಾರವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳನ್ನು ಪಾರದರ್ಶಕತೆ ಆಧ್ಯಾದೇಶ ಅಥವಾ ಅಧಿಸೂಚನೆಯನ್ನು ಸಂಖ್ಯೆ: ಪಿಡಬ್ಲ್ಯು 154 ಎಫ್‌ಸಿ III 2000 ದಿನಾಂಕ 4.10.2000ದಲ್ಲಿ ಹೊರಡಿಸಿದ್ದು ಇದರಲ್ಲಿ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು. ಟೆಂಡರ್ ಅಂಗೀಕಾರಕ್ಕೆ ಗೊತ್ತುಮಾಡಿದ ದಿನಾಂಕದಿಂದ ಮುಂದಿನ ಆರು ತಿಂಗಳುಗಳ ಒಳಗೆ ನಿವೃತ್ತನಾಗಲಿರುವ ಒಬ್ಬನೇ ಅಧಿಕಾರಿಯನ್ನು ಒಳಗೊಂಡಿದ್ದರೆ ಅವನು ಸಂಗ್ರಹಣಾ ಸಂಸ್ಥೆಯ ಪೂರ್ವಾನುಮೋದನೆಯ ಪಡೆದ ತರುವಾಯವಲ್ಲದೆ, ಟೆಂಡರನ್ನು ಅಂಗೀಕರಿಸುವ ಕಾರ್ಯದಲ್ಲಿ ತೊಡಗತಕ್ಕದ್ದಲ್ಲ ಎಂದು ತಿಳಿಸಿರುತ್ತದೆ.

2) ರಾಜ್ಯ ಸರ್ಕಾರವು ಸರ್ಕಾರದಲ್ಲಿ ಖರೀದಿ ನೀತಿಯನ್ನು ಪರಿಷ್ಕರಿಸಲು ರಚಿಸಿದ್ದ ಅಧಿಕಾರಿಗಳ ಸಮಿತಿಯು ಸರ್ಕಾರದಲ್ಲಿ ಕೆಲವು ಅಧಿಕಾರಿಗಳು ನಿವೃತ್ತಿಗೆ ಮುನ್ನ ಖರೀದಿ ಮಾಡುವಲ್ಲಿ ನಿಯಮಗಳನ್ನು ಮೀರಿ ಖರೀದಿ ಮಾಡಿರುವುದನ್ನು ಗಮನಿಸಿರುತ್ತದೆ. ಆದುದರಿಂದ ಅದು ನೀಡಿರುವ ವರದಿಯಲ್ಲಿ ಅಧಿಕಾರಿಗಳು ನಿವೃತ್ತಿಗೆ 6 ತಿಂಗಳು ಇರುವಾಗ ಯಾವುದೇ ಖರೀದಿ ಮಾಡಲು ಆದೇಶ ನೀಡಕೂಡದೆಂದು ಶಿಫಾರಸ್ಸು ಮಾಡಿರುತ್ತದೆ.

3) ಈ ಕಾನೂನು ಎಲ್ಲಾ ಇಲಾಖೆಗಳಿಗೆ ಅನ್ವಯಿಸುತ್ತದೆ.